**ದಿನಾಂಕಃ 27-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಹೆಚ್. ಎಲ್. ಎಸ್. ವಕೀಲರಿಂದ**

1. ಈ ಅಪಘಾತ ಆಗಿ 10 ವರ್ಷ ಆಗಿದೆ. ನಾನು ಎ.ಪಿ.ಎಂ.ಸಿ., ಯಾರ್ಡ್ ನಲ್ಲಿ ಖಾಯಂ ನೌಕರ ಅಲ್ಲ ಎಂದರೆ ಸರಿ. ಅಪಘಾತ ದಿನ ನಾವು ಒಟ್ಟು 10 ಜನ ಕೆಲಸಕ್ಕೆ ಹೋಗಿದ್ದೆವು. 699/2017 ರ ಅರ್ಜಿದಾರರಾದ ವೆಂಕಟಯ್ಯ ರವರು ಈಗ ಮೃತ ಪಟ್ಟಿದ್ದಾರೆ. ತರಕಾರಿ ಇಳಿಸಲು ಆಟೋದವರೇ ಕರೆದುಕೊಂಡು ಹೋಗಿದ್ದರು. ಆಟೋದಲ್ಲಿ ಸುಮಾರು 5 – 6 ಜನ ಕುಳಿತುಕೊಳ್ಳುವಷ್ಟು ಆಸನ ಇತ್ತು ಎಂದರೆ ಸರಿ. ನಾನು ಆಟೋ ಮಧ್ಯಭಾಗದಲ್ಲಿ ಕುಳಿತುಕೊಂಡಿದ್ದೆ. ಮುಂದೆ ಬರುವ ವಾಹನಗಳು ಗೊತ್ತಾಗುತ್ತಿತ್ತು ಎನ್ನುವುದು ಸರಿ. ಆ ದಿನ ಟ್ರಾಕ್ಟರ್ ಬರುವುದನ್ನು ನಾನು ಅರ್ಧ ಕಿ. ಮೀ. ದೂರದಲ್ಲಿ ನೋಡಿದೆ. ಆ ದಿನ ನಾವು ಹೋಗುತ್ತಿದ್ದ ಆಟೋ ಚಾಲಕನೇ ವೇಗವಾಗಿ ಚಲಾಯಿಸಿಕೊಂಡು ಹೋಗಿ ಟ್ರಾಕ್ಟರ್ ಗೆ ಡಿಕ್ಕಿ ಪಡಿಸಿದ ಎಂದರೆ ಸರಿಯಲ್ಲ. ಆಟೋದಲ್ಲಿ ಚಾಲಕನಿಗೂ ಸಹ ಗಾಯ ಆಯಿತು. ಆಟೋಗೆ ಜಖಂ ಆಗಿರಲಿಲ್ಲ. ನನ್ನನ್ನು ಆಟೋದವರೆ ನಾಗಮಂಗಲ ಆಸ್ಪತ್ರೆಯಲ್ಲಿ ಸೇರಿಸಿದರು. ಚುಂಚನಗಿರಿ ಆಸ್ಪತ್ರೆಯಲ್ಲಿ 3 ದಿನ ಇದ್ದೆ. 3 ದಿನ ಚಿಕಿತ್ಸೆ ಪಡೆದ ನಂತರ ಅಲ್ಲಿ ಆಗುವುದಿಲ್ಲ ಎಂದು ಹೇಳಿದ ಮೇಲೆ ಶುಭೋದಯ ಆಸ್ಪತ್ರೆಗೆ ಹೋದೆ. ಯಾವ ಡಾಕ್ಟರ್ ಎಂದು ಹೇಳಲು ಆಗುವುದಿಲ್ಲ. ಶುಭೋದಯ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿ 15 ದಿನ ಇದ್ದೆ. ನಾನು ಸದರಿ ಆಸ್ಪತ್ರೆಯಲ್ಲಿ 15 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಎಡ ತೋಳಿಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರ ಹೆಸರು ಗೊತ್ತಿಲ್ಲ. ನನಗೆ ಶಸ್ತ್ರ ಚಿಕಿತ್ಸೆ ಆಗಿ 10 ವರ್ಷ ಆಗಿದೆ. ನನಗೆ ನೋವು ಬಂದಾಗಲೆಲ್ಲಾ ನಾಗಮಂಗಲ ಆಸ್ಪತ್ರೆಯಲ್ಲಿ ತೋರಿಸಿಕೊಂಡಿರುತ್ತೇನೆ. ಕೆಲಸ ಮಾಡಲು ಆಗುವುದಿಲ್ಲ.

2. ವೈದ್ಯರು ರಾಡ್ ತೆಗೆಸಬೇಕು ಎಂದರು ಮತ್ತು 6 ತಿಂಗಳು ವಿಶ್ರಾಂತಿ ಪಡೆಯಬೇಕು ಎಂದು ಹೇಳಿರುತ್ತಾರೆ. ನನಗೆ ವಯಸ್ಕ ಮಕ್ಕಳಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಗಂಡ ಇಲ್ಲ. ಮಕ್ಕಳನ್ನು ನಾನೇ ಸಾಕುತ್ತಿದ್ದೇನೆ. ಅವರ ವಿದ್ಯಾಭ್ಯಾಸಕ್ಕೆ ಕೂಲಿ ಮಾಡುತ್ತೇನೆ. ತಿಂಗಳಲ್ಲಿ 25 ದಿನ ಕೂಲಿಗೆ ಹೋಗುತ್ತೇನೆ.

ಒಂದು ದಿನ ಕೂಲಿಗೆ 400 ರೂ. ಕೊಡುತ್ತಾರೆ. ತಿಂಗಳಿಗೆ ರೂ.20,000/- ಸಂಪಾದಸುತ್ತಿರುವ ಬಗ್ಗೆ ದಾಖಲೆ ಇಲ್ಲ. ನನ್ನ ಕೂಲಿಯ ಸಂಪಾದನೆ ಜೀವನಕ್ಕೆ ಸಾಕಾಗುತ್ತದೆ. ನಾನು ರೂ.25,000/- ಗಳಿಗೆ ಮಾತ್ರ ಔಷಧಿ ಬಿಲ್ಲುಗಳನ್ನು ಕೊಟ್ಟಿರುತ್ತೇನೆ ಎಂದರೆ ಕೆಲವು ಕಳೆದು ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ನನ್ನನ್ನು ನೋಡಿಕೊಳ್ಳುತ್ತಿದ್ದವರು ನನ್ನ ಸಂಬಂಧಿಕರು. ಅವರು ಸಂಬಂಧಿಕರಾಗಿದ್ದರಿಂದ ಅವರಿಗೆ ನಾನು ಯಾವುದೇ ಕೂಲಿ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಈಗ ಮೊದಲಿನಂತೆ ಕೂಲಿ ಮಾಡಿ ಜೀವನ ಮಾಡುತ್ತಿರುವುದರಿಂದ ನನಗೆ ಅಪಘಾತದಿಂದ ಯಾವುದೇ ತೊಂದರೆ ಆಗಿಲ್ಲ ಆ ಕಾರಣ ನಾನು ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ